**<u>ಅಸಲು ದಾವಾ. ನಂಃ 173/2022</u>**
**ಪಿಡಬ್ಲೂ - 1 ಯಲ್ಲಪ್ಪಗೌಡ ಹಿರೇಗೌಡ್ರ**

**<u>ಸಾಕ್ಷಿಯನ್ನು ದಿನಾಂಕಃ 03-08-2026 ರಂದು ಪುನಃ ಕರೆಯಿಸಿ, ಪ್ರಮಾಣೀಕರಿಸಲಾಯಿತು.</u>**
**<u>ಮಧ್ಯಂತರ ಅರ್ಜಿ ಸಂಖ್ಯೆ 10 ಮತ್ತು 11 ರ ಮೇಲೆ ಮಾಡಲಾದ ಆದೇಶದ ಮೇರೆಗೆ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್.ಬಿ.ಪಿ. ವಕೀಲರಿಂದಃ</u>**

1. ನನ್ನ ತಂದೆ ಗುರುನಗೌಡ 2009 ರಲ್ಲಿ ತೀರಿಕೊಂಡಿರುತ್ತಾರೆ. ಅವರಿಗೆ ವಾರಸುದಾರರು ನಾನು ಮತ್ತು ಪ್ರತಿವಾದಿಗಳು ವಾರಸುದಾರರಾಗಿರುತ್ತೇವೆ. ನನ್ನ ತಂದೆಗೆ ಗುರುನಗೌಡರವರಿಗೆ ಒಟ್ಟು 6 ಜನ ಮಕ್ಕಳು. ಅವರುಗಳೆಂದರೆ 1) ಯಲ್ಲವ್ವ 2) ಶಾಂತವ್ವ 3) ಈರವ್ವ 4) ರತ್ನವ್ವ 5) ಯಲ್ಲಪ್ಪಗೌಡ (ನಾನು) ಮತ್ತು 6) ವೀರನಗೌಡ. ಈ ದಾವೆಯಲ್ಲಿ ನನ್ನ 4 ಜನ ಸಹೋದರಿಯರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ನಾನು ದಾವೆಯೊಂದಿಗೆ ಅಪೂರ್ಣವಾದ ವಂಶವೃಕ್ಷವನ್ನು ಕೊಟ್ಟು ನ್ಯಾಯಾಲಯಕ್ಕೆ ತಪ್ಪು ಮಾಹಿತಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

2. ನನ್ನ ತಂದೆ ಮೃತ್ಯು ಪತ್ರವನ್ನು ಬರೆದ ದಿನಾಂಕ ಗೊತ್ತಿಲ್ಲ. ಆದರೆ 2002 ರಲ್ಲಿ ಮಾಡಿರುತ್ತಾರೆ. ಆ ಮೃತ್ಯು ಪತ್ರ 1 ನೇ ಪ್ರತಿವಾದಿ ಬಳಿ ಇರುತ್ತದೆ. ಅದರ ಪ್ರತಿ ನನ್ನ ಬಳಿ ಇರುವುದಿಲ್ಲ. ನನ್ನ ತಂದೆ ಮೃತ್ಯು ಪತ್ರ ಬರೆದುಕೊಟ್ಟಿರುತ್ತಾರೆ ಅದು 1 ನೇ ಪ್ರತಿವಾದಿಯ ಬಳಿ ಇರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ಮೃತ್ಯು ಪತ್ರ ನನ್ನ ಸಹೋದರನ ಬಳಿ ಇರುತ್ತದೆ ಎಂದು ಹೇಳಿ ಬರೆಯಿಸಿರುತ್ತೇನೆ. ಮೃತ್ಯು ಪತ್ರದ ಪ್ರಕಾರ ನನ್ನ ತಂದೆ 2002 ರಲ್ಲಿ ವಾಟ್ನಿ ಮಾಡಿರುತ್ತಾರೆ. 2002 ರಲ್ಲಿ ನನ್ನ ತಂದೆ ವಾಟ್ನಿ ಮಾಡಿಕೊಟ್ಟಿದ್ದರೂ ಸಹ ಪುನಃ ಏಕೆ ದಾವೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ನನಗೆ ಮನೆ ಬರಬೇಕು ಮತ್ತು ತಮ್ಮನ ಹೆಂಡತಿಯ ಹೆಸರಿಗೆ ಇರುವ ಜಾಗ ಬರಬೇಕು, ಅದಕ್ಕೆ ದಾವೆ ಮಾಡಿರುತ್ತೇನೆ. ನನ್ನ ದಾವೆಯಲ್ಲಿ ನನ್ನ ತಂದೆ ಸರಿಯಾದ ರೀತಿಯಲ್ಲಿ ಹಂಚಿಕೆ ಮಾಡಿಕೊಟ್ಟಿರುವುದಿಲ್ಲ, ಪುನಃ ಹಂಚಿಕೆ ಮಾಡಿಕೊಡಿ ಎಂದು ಕೇಳಿಲ್ಲ.

**<u>ಅಸಲು ದಾವಾ. ನಂಃ 173/2022</u>**
**ಪಿಡಬ್ಲೂ - 1 ಯಲ್ಲಪ್ಪಗೌಡ ಹಿರೇಗೌಡ್ರ**

3. ಮೃತ್ಯು ಪತ್ರ ನೋಂದಣಿಯಾಗಿಲ್ಲ. ಮೃತ್ಯು ಪತ್ರದ ಮೇಲೆ ಪ್ರೊಬೆಟ್ ಪಡೆದುಕೊಂಡಿಲ್ಲ. ಮೃತ್ಯು ಪತ್ರದ ಪ್ರಕಾರ ಸರ್ವೇ ನಂಬರ 127/4 ಬಿ ರಲ್ಲಿ 3 ಎಕರೆ 20 ಗುಂಟೆ, 41/1 ಬಿ ರಲ್ಲಿ ಅದರಲ್ಲಿ 3 ಎಕರೆ 4 ಗುಂಟೆ ನನಗೆ ಬಂದಿರುತ್ತದೆ. ನನ್ನ ತಮ್ಮನಿಗೆ

ಅದೇ ಮೃತ್ಯು ಪತ್ರದ ಪ್ರಕಾರ ಸರ್ವೇ ನಂಬರ 41/1 ಎ/1 ರಲ್ಲಿ 3 ಎಕರೆ 11 ಗುಂಟೆ, 41/5 ರಲ್ಲಿ 20 ಗುಂಟೆ ಬಂದಿರುತ್ತವೆ. ಸರ್ವೇ ನಂಬರ 28 ರಲ್ಲಿ 5 ಎಕರೆ 24 ಗುಂಟೆ, ಸರ್ವೇ ನಂಬರ 150/1 ಎ ರಲ್ಲಿ 3 ಎಕರೆ 21 ಗುಂಟೆ, ಸರ್ವೇ ನಂಬರ 150/1 ಬಿ ರಲ್ಲಿ 3 ಎಕರೆ 10 ಗುಂಟೆ, ಸರ್ವೇ ನಂಬರ 180/4 ಬಿ ರಲ್ಲಿ 10 ಗುಂಟೆ, ಸರ್ವೇ ನಂಬರ 180/13 ರಲ್ಲಿ 9 ಗುಂಟೆ, ಸರ್ವೇ ನಂಬರ 180/3 ರಲ್ಲಿ 17 ಗುಂಟೆ, ಸರ್ವೇ ನಂಬರ 180/2 ಬಿ ರಲ್ಲಿ 18 ಗುಂಟೆ, 41/3, 4 ಎಕರೆ ಜಮೀನು ಇಬ್ಬರೂ ನಡುವೆ ಜಂಟಿಯಾಗಿರುತ್ತವೆ ಎಂದು ಮೃತ್ಯು ಪತ್ರದಲ್ಲಿ ಬರೆದಿರುತ್ತಾರೆ. ಆ ಮೃತ್ಯು ಪತ್ರವನ್ನು ಹಾಜರು ಪಡಿಸದೇ ಇದ್ದರೇ ಯಾವ ಯಾವ ಆಸ್ತಿಗಳು ಯಾರ ಯಾರ ಹೆಸರಿಗೆ ಬಂದಿರುತ್ತವೆ ಎಂದು ನ್ಯಾಯಾಲಯಕ್ಕೆ ಗೊತ್ತಾಗುವುದಿಲ್ಲ ಎಂದರೆ ಸರಿಯಲ್ಲ.

4. ಮೃತ್ಯು ಪತ್ರ ಪ್ರಕಾರ ನನಗೆ ಬಂದಿರುವ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ಆ ಆಸ್ತಿಗಳನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಉಳಿದ ಆಸ್ತಿಗಳಿಗೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೇ ನಂಬರ 127/4 ಬಿ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆಃ ಬೇಲೇರಿಯವರ ಜಮೀನು ಇರುತ್ತದೆ. ಪಶ್ಚಿಮಕ್ಕೆಃ ನನ್ನ ದೊಡ್ಡಪ್ಪನ ಮಗ ಗಂಗನಗೌಡ ಆಸ್ತಿ, ಉತ್ತರಕ್ಕೆಃ ದಾನರೆಡ್ಡಿಯವರ ಜಮೀನು ಮತ್ತು ದಕ್ಷಿಣಕ್ಕೆಃ ಹೊನ್ನಾಪೂರರವರ ಜಮೀನು ಇರುತ್ತದೆ. ಸರ್ವೇ ನಂಬರ 150/1 ಎ ಮತ್ತು ಬಿ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆಃ ಕಲ್ಲನಗೌಡರವರ ಜಮೀನು ಇರುತ್ತದೆ. ಪಶ್ಚಿಮಕ್ಕೆಃ ಈರನಗೌಡ ಹಿರೇಗೌಡ್ರುರವರ ಜಮೀನು, ಉತ್ತರಕ್ಕೆಃ ಕಲ್ಲನಗೌಡರವರ ಜಮೀನು ಮತ್ತು ದಕ್ಷಿಣಕ್ಕೆಃ ಕುಬೇರಗೌಡ ಹಿರೇಗೌಡರವರ ಜಮೀನು ಇರುತ್ತದೆ.



5. ಸರ್ವೇ ನಂಬರ 180/4 ಬಿ, 180/3, 180/2 ಬಿ ಆಸ್ತಿಗಳ ಒಟ್ಟು ವಿಸ್ತೀರ್ಣ 1 ಎಕರೆ 5 ಗುಂಟೆ ಇದ್ದು, ಆ ಆಸ್ತಿಗಳ ಚಕ್ಕುಬಂದಿ ಪೂರ್ವಕ್ಕೆಃ ಚಿನ್ನಪ್ಪಗೌಡರ ಆಸ್ತಿ, ಪಶ್ಚಿಮಕ್ಕೆಃ ರಾಮನಗೌಡನ ಆಸ್ತಿ, ಉತ್ತರಕ್ಕೆಃ ಅರಳಿಯವರ ಆಸ್ತಿ ಮತ್ತು ದಕ್ಷಿಣಕ್ಕೆಃ ಬಸನಗೌಡ ಹಿರೇಗೌಡ್ರುರವರ ಜಮೀನು ಇರುತ್ತದೆ.

6. ಸರ್ವೇ ನಂಬರ 180/13 ರಲ್ಲಿ 13 ಎಕರೆ ಇದ್ದು ಅದರ ಚಕ್ಕುಬಂದಿ ಪೂರ್ವಕ್ಕೆಃ

ಶಿವನಗೌಡ ಹಿರೇಗೌಡರವರ ಜಮೀನು, ಪಶ್ಚಿಮಕ್ಕೆಃ ಪ್ರಭುಗೌಡ ಪಾಟೀಲರವರ ಜಮೀನು, ಉತ್ತರಕ್ಕೆಃ ಪೂರ್ವಕ್ಕೆಃ ಶಿವನಗೌಡ ಹಿರೇಗೌಡರವರ ಜಮೀನು ಮತ್ತು ದಕ್ಷಿಣಕ್ಕೆಃ ರಸ್ತೆ ಇರುತ್ತದೆ.

7. ಸರ್ವೇ ನಂಬರ 28 ರಲ್ಲಿ 5 ಎಕರೆ 24 ಗುಂಟೆ ಜಮೀನಿನ ಚಕ್ಕುಬಂದಿ ಪೂರ್ವಕ್ಕೆಃ ಭರಮಗೌಡರ ಆಸ್ತಿ, ಪಶ್ಚಿಮಕ್ಕೆಃ ಅರಳಿಯವರ ಜಮೀನು, ಉತ್ತರಕ್ಕೆಃ ಅರಹುಣಸಿಯವರ ಆಸ್ತಿ ಮತ್ತು ದಕ್ಷಿಣಕ್ಕೆಃ ಅರಹುಣಸಿಯವರ ಆಸ್ತಿ ಇರುತ್ತದೆ.

8. ಸರ್ವೇ ನಂಬರ 41/1 ಬಿ ರಲ್ಲಿ 3 ಎಕರೆ 8 ಗುಂಟೆ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆಃ ಮಡಿವಾಳರವರ ಆಸ್ತಿ, ಪಶ್ಚಿಮಕ್ಕೆಃ ಶಿವನಗೌಡ ಹಿರೇಗೌಡ್ರರವರ ಜಮೀನು, ಉತ್ತರಕ್ಕೆಃ ರುದ್ರಗೌಡ ಹಿರೇಗೌಡ್ರರವರ ಜಮೀನು ಮತ್ತು ದಕ್ಷಿಣಕ್ಕೆಃ ಚಳಿಗೇರಿಯವರ ಜಮೀನು ಇರುತ್ತದೆ.

9. ಸರ್ವೇ ನಂಬರ 41/3 ರಲ್ಲಿ 4 ಎಕರೆ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆಃ ಚಿನ್ನಪ್ಪರವರ ಆಸ್ತಿ, ಪಶ್ಚಿಮಕ್ಕೆಃ ಶಂಬುಗೌಡ ಹಿರೇಗೌಡ್ರರವರ ಜಮೀನು, ಉತ್ತರಕ್ಕೆಃ ಚಳಿಗೇರಿಯವರ ಜಮೀನು ಮತ್ತು ದಕ್ಷಿಣಕ್ಕೆಃ ಉಗಲಾಟರವರ ಜಮೀನು ಇರುತ್ತದೆ.

10. ಸರ್ವೇ ನಂಬರ 41/1 ಎ/1 ರಲ್ಲಿ 3 ಎಕರೆ 11 ಗುಂಟೆ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆಃ ರುದ್ರಗೌಡ ಹಿರೇಗೌಡ್ರರವರ ಆಸ್ತಿ, ಪಶ್ಚಿಮಕ್ಕೆಃ ಶಿವನಗೌಡ ಹಿರೇಗೌಡ್ರರವರ ಜಮೀನು, ಉತ್ತರಕ್ಕೆಃ ಬಸನಗೌಡ ಪಾಟೀಲರವರ ಜಮೀನು ಮತ್ತು ದಕ್ಷಿಣಕ್ಕೆಃ ನನಗೆ ಸೇರಿದ ಸರ್ವೇ ನಂಬರ ಆಸ್ತಿ ಇರುತ್ತದೆ.



11. ಸರ್ವೇ ನಂಬರ 41/5 ರಲ್ಲಿ 20 ಗುಂಟೆ ಆಸ್ತಿಯ ಚಕ್ಕುಬಂದಿ ಪೂರ್ವಕ್ಕೆಃ ರುದ್ರಗೌಡ ಹಿರೇಗೌಡ್ರರವರ ಆಸ್ತಿ, ಪಶ್ಚಿಮಕ್ಕೆಃ ವೀರನಗೌಡ ಹಿರೇಗೌಡ್ರರವರ ಜಮೀನು, ಉತ್ತರಕ್ಕೆಃ ಬಸನಗೌಡ ಪಾಟೀಲರವರ ಜಮೀನು ಮತ್ತು ದಕ್ಷಿಣಕ್ಕೆಃ ನನಗೆ ಸೇರಿದ ಜಮೀನು ಇರುತ್ತದೆ.

12. ವಿ.ಪಿ.ಸಿ. ನಂಬರ 303/ಎ ರಲ್ಲಿ ನಾನು ಮತ್ತು ನನ್ನ ತಮ್ಮ ಮನೆ ಕಟ್ಟಿಸಿರುತ್ತೇವೆ. ಅದರ ಅಳತೆ ಗೊತ್ತಿಲ್ಲ. ಅದು ನಮ್ಮ ತಂದೆಯಿಂದ ಬಂದಿರುತ್ತದೆ. ಇದರ

ಚಕ್ಕುಬಂದಿ ನೆನಪಿಲ್ಲ. ಗಿರಿಜಮ್ಮ ಹಿರೇಗೌಡರವರ ಹೆಸರಿಗೆ ಪ್ಲಾಟ್ ಇರುತ್ತದೆ, ಅದರ ನಂಬರ 850/43. ಇದರ ಚಕ್ಕುಬಂದಿ ಪೂರ್ವಕ್ಕೆಃ ಶಿವನಗೌಡ ಹಿರೇಗೌಡರವರ ಮಗನ ಆಸ್ತಿ, ಪಶ್ಚಿಮಕ್ಕೆಃ ಶಂಕ್ರಪ್ಪರವರ ಆಸ್ತಿ, ಉತ್ತರಕ್ಕೆಃ ಸರ್ಕಾರಿ ರಸ್ತೆ, ದಕ್ಷಿಣಕ್ಕೆಃ ನಮ್ಮ ಊರಿನ ಕೆರೆ ಇರುತ್ತದೆ.

13. ವಿ.ಪಿ.ಸಿ.ನಂಬರ 303 ರಲ್ಲಿ ಅರ್ಧ ಆಸ್ತಿಯನ್ನು ನನ್ನ ತಮ್ಮ ಖರೀದಿ ಪತ್ರದ ಮುಖಾಂತರ ಖರೀದಿಸಿರುತ್ತಾನೆ ಎಂದರೆ ಸರಿ. ಅದನ್ನು ಜಮೀನಿನ ಆದಾಯದಿಂದ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಇಬ್ಬರೂ ಕೂಡಿಯೇ ತೆಗೆದುಕೊಂಡು ಅವನ ಹೆಸರಿಗೆ ನಾನೇ ಹಚ್ಚಿರುತ್ತೇನೆ ಎಂದು ನುಡಿಯುತ್ತಾರೆ. ಅದನ್ನು 2016 ರಲ್ಲಿ ಖರೀದಿಸಿರುತ್ತೇನೆ. ಅದನ್ನು ಬಿತ್ತನಗೌಡ ಮತ್ತು ಗಂಗನಗೌಡ ಹಿರೇಗೌಡ್ರುರವರಿಂದ ಖರೀದಿಸಿರುತ್ತೇವೆ. ಆ ಮನೆಯನ್ನು ಪ್ರತಿವಾದಿ ಒಬ್ಬನೇ ಕಟ್ಟಿಸಿರುತ್ತಾನೆ ಎಂದರೆ ಸುಳ್ಳು. ಮನೆಯನ್ನು ಕಟ್ಟಿಸಲು ರೂ. 50 ಲಕ್ಷ ಹಣ ಖರ್ಚು ಆಗಿರುತ್ತದೆ. ಸದರಿ ವಿಷಯವನ್ನು ನನ್ನ ವಾದ ಪತ್ರದಲ್ಲಿ ಹೇಳಿ ಬರೆಯಿಸಿಲ್ಲ. ಸದರಿ ಆಸ್ತಿಯು ವೀರನಗೌಡ ಒಬ್ಬನ ಸ್ವಯಾರ್ಜಿತ ಆಸ್ತಿ ಎಂದರೆ ಸುಳ್ಳು. ಖರೀದಿಸಿದಾಗ ಅದು ಬಯಲುಜಾಗ ಇತ್ತು ಎಂದರೆ ಸುಳ್ಳು. ಬಯಲುಜಾಗ ಇತ್ತು ಹಳೆಯ ಮನೆ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಹಳೆ ಮನೆಯನ್ನು ಕೆಡವಿ ಸುಮಾರು 30 ಲಕ್ಷ ಖರ್ಚು ಮಾಡಿ ಪ್ರತಿವಾದಿ ಮನೆ ಕಟ್ಟಿರುತ್ತಾನೆ ಎಂದರೆ ಸುಳ್ಳು.

<u>ಅಸಲು ದಾವಾ. ನಂಃ 173/2022</u><br>ಪಿಡಬ್ಲೂ - 1 ಯಲ್ಲಪ್ಪಗೌಡ ಹಿರೇಗೌಡ್ರ

14. ವಿ.ಪಿ.ಸಿ. ನಂಬರ 850/43, 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸುಳ್ಳು. ಆ ಆಸ್ತಿಯನ್ನು 2 ನೇ ಪ್ರತಿವಾದಿಯ ಹೆಸರಿಗೆ ಖರೀದಿಸಿರುತ್ತೇವೆ. ನನ್ನ ಸಹೋದರನಿಗೆ ಇಬ್ಬರೂ ಹೆಂಡತಿಯರು. ನನಗೆ ಹೆಂಡತಿ ಮತ್ತು ಮಕ್ಕಳು ಇರುತ್ತಾರೆ. ನನ್ನ ಮಕ್ಕಳು ಕೂಲಿ ಕೆಲಸ ಮಾಡುತ್ತಾರೆ. 2016 ರಲ್ಲಿ ನಾನು ನೌಕರಿ ಮಾಡುತ್ತಿದ್ದೆ. ನಾನು ನೌಕರಿಗೆ ಸೇರಿದಾಗ ರೂ. 490/- ಸಂಬಳ ಇತ್ತು. ನಿವೃತ್ತಿಯಾದಾಗ ರೂ. 45,000/- ಸಂಬಳ ಇತ್ತು. ನಾನು ಗದಗನಲ್ಲಿ ಹೆಂಡತಿ ಮತ್ತು ಮಕ್ಕಳೊಂದಿಗೆ ವಾಸವಾಗಿರುತ್ತೇನೆ.

15. ನನಗೆ ಹಣಕಾಸಿನ ಸಮಸ್ಯೆ ಇದ್ದು, 50 ಲಕ್ಷ ಹಣ ಖರ್ಚು ಮಾಡುವಷ್ಟು ಸಾಮರ್ಥ್ಯ ಇರಲಿಲ್ಲ ಎಂದರೆ ಸುಳ್ಳು. ಈ ಎರಡೂ ಆಸ್ತಿಗಳನ್ನು ಖರೀದಿಸುವ ಕಾಲಕ್ಕೆ ನಮ್ಮ

ತಂದೆ ತೀರಿಕೊಂಡಿದ್ದರು. 2000 ನೇ ಇಸ್ವಿಯಲ್ಲಿಯೇ ಅಪಸಾತ್ ವಾಟ್ನಿಯಾಗಿರುತ್ತದೆ. ಆ ವಾಟ್ನಿ ಪತ್ರ ತಮ್ಮನ ಬಳಿ ಇರುತ್ತದೆ. ಸದರಿ ವಿಷಯವನ್ನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾಟ್ನಿ 2002 ರಲ್ಲಿ ಆಗಿರುತ್ತದೆ. ನಮ್ಮ ತಾಯಿ 2002 ರಲ್ಲಿಯೇ ತೀರಿಕೊಂಡಿರುತ್ತಾರೆ.

16. ನನ್ನ ತಂದೆ ನನ್ನ ಸಹೋದರಿಯರಿಗೆ ಯಾವುದೇ ಆಸ್ತಿ ಕೊಟ್ಟಿಲ್ಲ. ವಿ.ಪಿ.ಸಿ. ನಂಬರ 850/43, 2 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಅದರಲ್ಲಿ ನನಗೆ ಯಾವುದೇ ಹಿಸ್ಸಾ ಇಲ್ಲ ಎಂದರೆ ಸುಳ್ಳು. ನನ್ನ ಹೆಸರಿನಲ್ಲಿರುವ ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸದರಿ ಆಸ್ತಿಗಳನ್ನು ಯಾವ ಕಾರಣಕ್ಕಾಗಿ ಸೇರಿಸಿಲ್ಲ ಎಂದರೆ ಸಾಕ್ಷಿಯು ಆ ಆಸ್ತಿಗಳನ್ನು ನನಗೆ ಸೇರಿಸಬೇಕು ಎಂದು ಅನಿಸಿರುವುದಿಲ್ಲ, ಅದಕ್ಕೆ ಸೇರಿಸಿಲ್ಲ ಎಂದು ನುಡಿಯುತ್ತಾರೆ.

17. ಈ ದಾವೆಯನ್ನು ಸಲ್ಲಿಸಲು ಯಾವ ತಿಂಗಳು, ದಿನದಂದು ಉದ್ಭವವಾಯಿತು ಎಂದು ಗೊತ್ತಿಲ್ಲ, ಆದರೆ 2022 ರಲ್ಲಿ 5 ನೇ ತಿಂಗಳಲ್ಲಿ ಉದ್ಭವವಾಯಿತು ಎಂದು ನುಡಿಯುತ್ತಾರೆ. ಈ ದಾವೆಯನ್ನು ಸಲ್ಲಿಸಲು ಮನೆಯಲ್ಲಿ ನಮ್ಮ ಮನೆದೇವರ ಫೋಟೋ ಇದ್ದು, ನನ್ನ ಮಗ ಮತ್ತು ಸೊಸೆ



ಮದುವೆಯಾದ ತಕ್ಷಣ ನಮಸ್ಕರಿಸಲು ಮನೆಗೆ ಹೋದಾಗ ಇಲ್ಲಿಗೆ ಯಾಕೆ ಬಂದಿದ್ದೀರಿ ಎಂದು ಪ್ರತಿವಾದಿಗಳು ಹೊಡೆದು ಕಳುಹಿಸಿದ್ದರಿಂದ ಉದ್ಭವವಾಗಿರುತ್ತದೆ. ಸದರಿ ವಿಷಯವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೇಲೆ ಕ್ರಿಮಿನಲ್ ಕೇಸು ಇರುತ್ತದೆ, ನಾನು ಸಹ ಅವರ ಮೇಲೆ ಮಾಡಿರುತ್ತೇನೆ. ನನ್ನ ದಾವೆಯಲ್ಲಿ ಯಾವಾಗ ದಾವೆಗೆ ಕಾರಣ ಉಂಟಾಯಿತು ಎಂದು ಬರೆಸಿಲ್ಲ ಎಂದರೆ ಸರಿಯಲ್ಲ. ಆ ರೀತಿ ಹೇಳದೆ ಇರುವುದರಿಂದ ನನ್ನ ದಾವೆ ವಜಾ ಆಗುತ್ತದೆ ಎಂದರೆ ಸಾಕ್ಷಿಯು ವಜಾ ಆಗುವುದಿಲ್ಲ ಎಂದು ನುಡಿಯುತ್ತಾರೆ.

18. 1985 ರಲ್ಲಿ ನನ್ನ ಸಹೋದರ ವೀರನಗೌಡ ಗಿಣಗೇರ ಗ್ರಾಮದಲ್ಲಿ ಕೂಲಿ ಮಾಡುತ್ತಿದ್ದ ಎಂದರೆ ಸಾಕ್ಷಿಯು ಇಬ್ಬರೂ ಮಾಡುತ್ತಿದ್ದೇವು ಎಂದು ನುಡಿಯುತ್ತಾರೆ. ಗಿಣಗೇರಿಯಲ್ಲಿ ನೀರಾವರಿ ಇದ್ದು, ಫಲವತ್ತಾದ ಜಮೀನು ಇರುತ್ತವೆ ಎಂದರೆ ಸರಿ. ಅಲ್ಲಿ ನನ್ನ ತಮ್ಮ ಒಬ್ಬನೇ ಕೂಲಿ ಮಾಡುತ್ತಾ, ಸರ್ವೆ ನಂಬರ 228/ಎ ಆಸ್ತಿಯನ್ನು ದುಡಿದು 1

ಎಕರೆ 8 ಗುಂಟೆ ಜಮೀನನ್ನು ಖರೀದಿಸಿದ್ದ ಎಂದರೆ ಸುಳ್ಳು. ಅದರಲ್ಲಿ ಒಟ್ಟು ವಿಸ್ತೀರ್ಣ 5 ಎಕರೆ 24 ಗುಂಟೆ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತಲೇಖನದಂತೆ, ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಅದೆ.

**-ಸಹಿ-**

ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ.